## ಇಗೋ ಇಲ್ಲಿದೆ, ಒಳ್ಳೆಯ ಸುದ್ದಿ!


ನಾವು ಪ್ರತಿನಿತ್ಯವೂ ರೇಡಿಯೊದಲ್ಲಿ ಕೇಳುತ್ತಿರುವ, ದೂರದರ್ಶನದಲ್ಲಿ ನೋಡುತ್ತಿರುವ, ಮತ್ತು ಪತ್ರಿಕೆಗಳಲ್ಲಿ ಓದುತ್ತಿರುವ ಸುದ್ದಿ ಎಂತಹ ಸುದ್ದಿ? ಬರೀ ಕೆಡುಕಿನ ಸುದ್ದಿ! ಹಾಗಾದರೆ ನಮ್ಮ ದೇಶದಲ್ಲಿ ಒಳ್ಳೆಯದೇನೂ ನಡೆಯುತ್ತಲೇ ಇಲ್ಲವೇ?! ಒಂದು ಕಡೆ ದರಿದ್ರರು ಮತ್ತು ಇನ್ನೊಂದು ಕಡೆ ಭ್ರಷ್ಟಾಚಾರಿಗಳು ತುಂಬಿರುವ ದೇಶವೇ ನಮ್ಮದು? ಇಲ್ಲ ಅಂತಾದರೆ, ನಮ್ಮ ದೇಶದ ನೂರಾರು ವಿಜ್ಞಾನಿಗಳು, ಸಾಹಿತಿಗಳು, ಸೇವಾ ಸಂಸ್ಥೆಗಳು ಮಾಡುತ್ತಿರುವ ಸಾಧನೆಗಳು, ಸೇವಾಕಾರ್ಯಗಳು ಸುದ್ದಿ ಎನ್ನಿಸಿಕೊಳ್ಳುವುದಕ್ಕೆ ಅರ್ಹತೆಯನ್ನು ಪಡೆದೇ ಇಲ್ಲವೆ? ಕೆಡುಕಿನ ಮರಳುಗಾಡಿನ ಮಧ್ಯೆ ಒಳಿತಿನ ಓಯಸಿಸ್ ಆಗಿರುವ ಈ ಸುದ್ದಿ ನಮಗೆ ಎಲ್ಲಿ ತಾನೇ ದೊರೆತೀತು?

ಇದಕ್ಕೆ ಉತ್ತರ ಬೇಕಾದರೆ ಇಂಟರ್‌ನೆಟ್‌ನಲ್ಲಿ, Goodnews india.com ಎಂಬ ವೆಬ್‌ಸೈಟ್‌ಗೆ ಭೇಟಿ ಕೊಡಿ. ಅಲ್ಲಿ ನಿಮಗೆ ದೊರಕುವುದು ಭಾರತದ ಬಗ್ಗೆ ಸಕಾರಾತ್ಮಕ ಅಭಿಪ್ರಾಯವನ್ನು ಮೂಡಿಸುವ ಸುವಾರ್ತೆಗಳೇ. ಅವೂ ಹತ್ತಾರಲ್ಲ, ನೂರಾರು.

ಇದರ ಸ್ಥಾಪನೆಯ ಕತೆ ರೋಚಕ. ೫೮ ವಯಸ್ಸಿನ ಮುದುಕರೊಬ್ಬರಿಗೆ, ತಮ್ಮ ಸುತ್ತಲಿರುವ ಪ್ರಪಂಚವೆಲ್ಲ, ಮೌಲ್ಯಗಳ ಅಧಃಪತನದಿಂದ ನಾಶವಾಗುತ್ತಿರುವಂತೆ ಕಂಡಿತು. ಹಾಗಾದರೆ ಇಂತಹ ಸ್ವಾರ್ಥಿಗಳಿಂದ, ಭ್ರಷ್ಟಾಚಾರಿಗಳಿಂದ ಕೂಡಿದ ಸಮಾಜ ಎಂದೋ ನಾಶವಾಗಬೇಕಾಗಿತ್ತು ಎನ್ನಿಸಿತು ಅವರಿಗೆ. ಹಾಗೆ ಆಗಿಲ್ಲವಲ್ಲ? ಹಾಗಾದರೆ ಈ ಸಮಾಜದಲ್ಲಿ ಒಳ್ಳೆಯ ಕಾರ್ಯಗಳನ್ನು ಮಾಡುತ್ತಿರುವ ಜನ ಇನ್ನೂ ಇದ್ದಾರೆ. ಅವರ ಸಾಧನೆಗಳನ್ನು ಇತರರಿಗೂ ಪರಿಚಯಿಸುವ ಕಾರ್ಯ ಆಗಬೇಕು ಎಂದು ಅವರು ನಿರ್ಧರಿಸಿದರು. ಅವರ ಹೆಸರು ಶ್ರೀ ಡಿ.ವಿ.ಶ್ರೀಧರನ್ ಎಂದು.

ಈ ದೇಶದಲ್ಲಿ ಯಾವ ಮಾಧ್ಯಮದ ಕಣ್ಣಿಗೂ ಬೀಳದೆ ಉದಾತ್ತ ಕಾರ್ಯಗಳನ್ನು ಮಾಡುತ್ತಿರುವ ಲೆಕ್ಕವಿಲ್ಲದಷ್ಟು ಮಂದಿ ಇದ್ದಾರೆ. ಅವರಲ್ಲಿ ಅಣ್ಣಾ ಹಜಾರೆ ಮುಂತಾದ ಕೆಲವರು ಮಾತ್ರ ಪ್ರಸಿದ್ಧಿಗೆ ಬಂದಿದ್ದಾರೆ. ಉಳಿದವರ ಸಾಧನಾಕಾರ್ಯಗಳ ಸುದ್ದಿಗೆ ನಮ್ಮ ಮಾಧ್ಯಮಗಳಲ್ಲಿ ಸ್ಥಾನವೇ ಇಲ್ಲ ಎಂದು ಮನಗಂಡ ಅವರು ೨೦೦೦ನೇ ಇಸವಿಯಲ್ಲಿ ಅಂತಹ ಸುದ್ದಿಗಳಿಗೇ ಮೀಸಲಾದ ಈ ವೆಬ್‌ಸೈಟ್ ಆರಂಭಿಸಿದರು. ಭಾರತೀಯರು ಔದ್ಯೋಗಿಕ, ಸಾಮಾಜಿಕ, ಶೈಕ್ಷಣಿಕ ಮುಂತಾದ ಹತ್ತುಹಲವು ಪ್ರಮುಖ ರಂಗಗಳಲ್ಲಿ ಮಾಡುತ್ತಿರುವ ಅಭೂತಪೂರ್ವ ಸಾಧನೆಗಳ ಯಶೋಗಾಥೆಯೇ ಇದಾಗಿದೆ.

"ಯಾವುದೇ ಪತ್ರಿಕೆ ಜನಸಾಧಾರಣರಿಗೆ ಸಕಲವಿಚಾರಗಳಲ್ಲಿಯೂ ಜೀವನಪೋಷಕ ಆದರ್ಶಗಳನ್ನು ಕೊಡಬೇಕು. ನಕಾರಾತ್ಮಕ ವಿಚಾರಗಳು ಮನುಷ್ಯರನ್ನು ದುರ್ಬಲಗೊಳಿಸುತ್ತವೆ... ಒಳ್ಳೆಯ ರಚನಾತ್ಮಕ ಭಾವನೆಗಳನ್ನು, ವಿಚಾರಗಳನ್ನು ಅವರಿಗೆ ನೀವು ಕೊಡಲು ಸಾಧ್ಯವಾದರೆ, ಮನುಷ್ಯರಾಗುವ ಮಟ್ಟಕ್ಕೆ ಜನರು ಬೆಳೆಯುತ್ತಾರೆ ಮತ್ತು ಅವರ ಸ್ವಂತ ಕಾಲುಗಳ ಮೇಲೆ ನಿಲ್ಲುವುದನ್ನು ಕಲಿಯುತ್ತಾರೆ." ಎಂಬ ಸ್ವಾಮಿ ವಿವೇಕಾನಂದರ ಮಾತನ್ನು ಸಾಕಾರಗೊಳಿಸುತ್ತಿದೆ ಈ ವಾರ್ತಾ ವೆಬ್‌ಸೈಟ್. ಬನ್ನಿ, ನಿಮಗೆ ಹಿತವೆನಿಸುವ ಸುದ್ದಿ ಬೇಕಾಗಿದ್ದರೆ ಇಗೋ ಇಲ್ಲಿದೆ, ಒಳ್ಳೆಯ ಸುದ್ದಿ !




## ಕ್ಯಾಥೊಲಿಕ್ ಚರ್ಚುಗಳಲ್ಲಿ ಹಿಂದೂ ಪದ್ಧತಿಗಳು

ಅಕ್ಟೋಬರ್ ೨೬, ೨೦೦೫ ರಂದು ಪುಣೆಯಲ್ಲಿ ಭಾರತದಾದ್ಯಂತ ಬಂದಿದ್ದ ಕ್ಯಾಥೊಲಿಕ್ ಚರ್ಚಿನ ಪ್ರಮುಖ ಪಾದ್ರಿಗಳು ಒಂದು ಠರಾವನ್ನು ಹೊರಡಿಸಿದರು. ಅದರಲ್ಲಿ ಅವರು ಭಾರತದ ಕ್ಯಾಥೊಲಿಕ್ ಚರ್ಚುಗಳಲ್ಲಿ ಹಿಂದೂ ಆಚರಣೆಗಳನ್ನು ಸೇರಿಸಿಕೊಳ್ಳುವುದಕ್ಕೆ ತಮ್ಮ ಸರ್ವೋಚ್ಚ ಕೇಂದ್ರಸ್ಥಾನವಾದ ವ್ಯಾಟಿಕನ್ನಿನ ಅನುಮತಿಯನ್ನು ಕೇಳಿಕೊಂಡಿದ್ದಾರೆ. ಈ ತೀರ್ಮಾನ ಸಮಾವೇಶದಲ್ಲಿ ಹಾಜರಾಗಿದ್ದ ಎಲ್ಲ ಪಾದ್ರಿಗಳ ಒಮ್ಮತದ ನಿರ್ಧಾರವಾಗಿದೆ. ಇದರ ಪ್ರಕಾರ ಚರ್ಚುಗಳಲ್ಲಿ ಪ್ರಾರ್ಥನೆಯ ಸಮಯದಲ್ಲಿ ಆರತಿ ಎತ್ತುವುದು, ಸಂಸ್ಕೃತ ಮತ್ತು ವೇದಗಳನ್ನು ಅಭ್ಯಾಸ ಮಾಡುವುದು ಮತ್ತು ಹಿಂದೂ ಆಶ್ರಮ ಜೀವನವನ್ನು ನಡೆಸುವುದು ಸೇರಿದೆ.

ಕ್ಯಾಥೊಲಿಕ್ ಚರ್ಚ್ ಅನ್ನು ಭಾರತೀಯವಾಗಿಸುವ ಕಾರ್ಯ ೧೯೬೦ರ ದಶಕದ ಮಧ್ಯಭಾಗದಲ್ಲಿಯೇ ಆರಂಭವಾಯಿತು. ಅದರ ಪ್ರಕಾರ ಅನೇಕ ಸ್ಥಳೀಯ ಆಚರಣೆಗಳನ್ನು ಮತ್ತು ಆಯಾ ಪ್ರಾಂತೀಯ ಭಾಷೆಯಲ್ಲಿ ಪ್ರಾರ್ಥನಾ ಸಭೆಗಳನ್ನು ನಡೆಸಲು ಆರಂಭಿಸಲಾಯಿತು. ಈಗ ನಾಲ್ಕು ದಶಕಗಳ ನಂತರ ಭಾರತೀಯ ಕ್ಯಾಥೊಲಿಕ್ ಸಂಸ್ಥೆ ಭಾರತದ ಅನೇಕ ಸಂಪ್ರದಾಯಗಳು ಮತ್ತು ಆಚರಣೆಗಳನ್ನು ಮೈಗೂಡಿಸಿಕೊಂಡು, ಕ್ರೈಸ್ತಧರ್ಮವನ್ನು ನಿಜವಾಗಿಯೂ ಭಾರತೀಯ ಧರ್ಮವೆಂದೇ ಬಿಂಬಿಸುವ ಪ್ರಯತ್ನದಲ್ಲಿ ತೊಡಗಿದೆ.

ಇದು ಇತರ ಧರ್ಮೀಯರಲ್ಲಿ, ಅದರಲ್ಲೂ ಹಿಂದೂಗಳಲ್ಲಿ ಒಂದು ಬಗೆಯ ಕುತೂಹಲ ಮತ್ತು ಆಶ್ಚರ್ಯಗಳ ಭಾವನೆಯನ್ನು ಉಂಟುಮಾಡುತ್ತದೆ. ಕ್ಯಾಥೊಲಿಕ್ ಚರ್ಚನ್ನು ಭಾರತೀಯಗೊಳಿಸುವ ಪ್ರಯತ್ನ ಸ್ತುತ್ಯರ್ಹವೇ ಆದರೂ, ಕ್ರೈಸ್ತಧರ್ಮ ಭಾರತವನ್ನು ಪ್ರವೇಶಿಸಿ ಶತಶತಮಾನಗಳೇ ಸಂದುಹೋಗಿದ್ದರೂ ಭಾರತೀಯವೆನಿಸದೆ, ಪರದೇಶೀಯ ಧರ್ಮವೇ ಆಗಿ ಉಳಿದಿದೆ ಎನ್ನುವ ಕಟುಸತ್ಯವನ್ನು ಅದು ಮತ್ತೆ ಬಯಲಿಗೆ ತಂದಿದೆ. ಹಾಗಾದರೆ ಈ ಬಗೆಯ ಭಾರತೀಕರಣ ಕ್ರಿಯೆ ಕೇವಲ ಹಿಂದೂ ಆಚರಣೆಗಳನ್ನು, ಅವುಗಳ ಬಾಹ್ಯರೂಪದಲ್ಲಿ ಅಳವಡಿಸಿಕೊಳ್ಳುವುದರಲ್ಲಿಯೇ ಮುಗಿದುಬಿಟ್ಟರೆ ಸಾಕೇ? ಭಾರತೀಯ ಸಂಸ್ಕೃತಿ ಮತ್ತು ಧರ್ಮಗಳ ಒಳತಿರುಳಾದ ಸರ್ವಧರ್ಮ ಸಮಭಾವದ ಸಂದೇಶವನ್ನು ಚರ್ಚು ಅಳವಡಿಸಿಕೊಳ್ಳುವುದೇ? ಹಾಗಾದರೆ ಯಾವಾಗ? – ಈ ಎಲ್ಲ ಪ್ರಶ್ನೆಗಳು ಮತ್ತು ಸಂದೇಹಗಳು ಉದ್ಭವವಾಗುತ್ತವೆ.

ಭಾರತೀಯ ಮನಸ್ಸು ಎಲ್ಲ ತೆರನ ವೈವಿಧ್ಯಗಳನ್ನೂ ಒಪ್ಪಿಕೊಂಡಿದೆ. ಆ ವೈವಿಧ್ಯಗಳ ಸಾರವಾದ ಏಕತೆಯನ್ನು ಅದು ಹುಡುಕುತ್ತಿದೆ. ಭಾರತೀಯ ಸಂಸ್ಕೃತಿ ತನ್ನೆಲ್ಲ ಲೌಕಿಕ ಮತ್ತು ಅಲೌಕಿಕ ಕ್ರಿಯೆಗಳಲ್ಲಿಯೂ ತ್ಯಾಗ, ಆಧ್ಯಾತ್ಮಿಕತೆ ಮತ್ತು ಭಗವದನ್ವೇಷಣೆಗಳನ್ನೇ ಮೂಲಸ್ರೋತವಾಗಿ ಹೊಂದಿದೆ. ಬದಲಾಗುತ್ತಿರುವ ಕಾಲ ಘಟ್ಟಗಳಿಗೆ ಅನುಸಾರವಾಗಿ, ಪುನರುಜ್ಜೀವನ ಹೊಂದುತ್ತಿದ್ದರೂ, ಆಂತರಿಕ ಸತ್ವವನ್ನು ಕಾಪಾಡಿಕೊಂಡು ಬಂದಿರುವ ಜೀವಂತ ಜೀವನಪದ್ಧತಿ ಇದು. ಇದರ ಶಾಶ್ವತ ಮೌಲ್ಯಗಳನ್ನು ಕ್ಯಾಥೊಲಿಕ್ ಚರ್ಚ್ ಮೈಗೂಡಿಸಿಕೊಳ್ಳುವುದೆ? ಹಾಗಾದರೆ ಮಾತ್ರ ಅದು ನಿಜವಾಗಿ ಭಾರತೀಯವಾಗಬಲ್ಲುದು. ✡